

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕಡಲಾಚೆ ಮೊಳಗಿದ ಕನ್ನಡದ ಕಹಳೆ

"You can't get to either Heaven or Hell without first passing through Atlanta" (ನೀವು ಸ್ವರ್ಗಕ್ಕಾಗಲೀ, ನರಕಕ್ಕಾಗಲೀ ಹೋಗಬೇಕೆಂದಿದ್ದರೆ ಅಟ್ಲಾಂಟಾ ಮುಖಾಂತರವೇ ಪ್ರಯಾಣಿಸಬೇಕು, ಬೇರೆ ಮಾರ್ಗವಿಲ್ಲ) ಎಂಬ ಗಾದೆ ಮಾತೊಂದು ಅಮೇರಿಕೆಯ ಜನರ ಬಾಯಲ್ಲಿ ಪ್ರಚಲಿತದಲ್ಲಿದೆ. ಅಟ್ಲಾಂಟಾ ಅಮೇರಿಕೆಯ ಆಗ್ನೇಯ ದಿಕ್ಕಿನಲ್ಲಿರುವ ಒಂದು ಪ್ರಸಿದ್ಧ ನಗರ; ಜಾರ್ಜಿಯಾ ರಾಜ್ಯದ ರಾಜಧಾನಿ. ಇಲ್ಲಿರುವ ಹಾರ್ಟ್ಸ್‌ಫೀಲ್ಡ್-ಜಾಕ್ಸನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿ 30 ಸೆಕೆಂಡಿಗೆ ಒಂದರಂತೆ ವಿಮಾನಗಳು ಬಂದಿಳಿಯುತ್ತವೆ ಇಲ್ಲವೇ ಬೇರೆಡೆಗೆ ಹಾರುತ್ತವೆ. ಇಲ್ಲಿಂದ ಅನತಿ ದೂರದಲ್ಲಿರುವುದೇ Georgia International Convention Centre. ವಿಮಾನ ನಿಲ್ದಾಣದಿಂದ ATL SkyTrain ನಲ್ಲಿ ಎರಡೇ ನಿಮಿಷಗಳ ಪ್ರಯಾಣ. ಕಳೆದ ಶುಕ್ರವಾರದಿಂದ ಭಾನುವಾರದವರೆಗೆ ಮೂರು ದಿನಗಳ ಕಾಲ ನಡೆದ 7ನೆಯ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಏರ್ಪಾಡಾಗಿದ್ದುದು ಈ ಸ್ಥಳದಲ್ಲಿಯೇ.

ಅದೊಂದು ವಿಶಾಲವಾದ ಸಭಾಂಗಣ. ಪ್ರವೇಶ ದ್ವಾರದಲ್ಲಿ ಸಮ್ಮೇಳನದ ಧ್ಯೇಯ ವಾಕ್ಯ "ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕುವೆಂಪು ಅವರ ಋಷಿ ವಾಣಿ ರಾರಾಜಿಸುತ್ತಿತ್ತು! ಅದಕ್ಕನುಗುಣವಾಗಿಯೇ ಅಮೇರಿಕೆಯ ಮೂಲೆ ಮೂಲೆಯಿಂದ ಮೂರು ಸಾವಿರಕ್ಕೂ ಹೆಚ್ಚು ಕನ್ನಡಾಭಿಮಾನಿಗಳು ಸಕುಟುಂಬ ಪರಿವಾರ ಆಗಮಿಸಿದ್ದರು; ಸಭಾಂಗಣದ ಒಳ ಹೊರಗೆ ನಿಲ್ಲಲೂ ಜಾಗವಿಲ್ಲದಷ್ಟು ಕಿಕ್ಕಿರಿದು ಜಮಾಯಿಸಿದ್ದರು. ವೇದಿಕೆಯ ಎರಡೂ ಬದಿಯಲ್ಲಿ ವೇದಿಕೆಯ ಹಿಂಭಾಗದ ರಜತ ಪರದೆಯಷ್ಟೇ ದೊಡ್ಡದಾದ ಎರಡು ಮೆಗಾಸ್ಕ್ರೀನ್‌ಗಳು ಇದ್ದವು. ದೂರದಲ್ಲಿ ಕುಳಿತಿದ್ದವರಿಗೆ ವೇದಿಕೆಯ ಮೇಲಿನ ದೃಶ್ಯಗಳು ನೇರವಾಗಿ ನೋಡುವುದಕ್ಕಿಂತ ಹೆಚ್ಚು ಸ್ಫುಟವಾಗಿ ಮೆಗಾಸ್ಕ್ರೀನ್‌ಗಳಲ್ಲಿ ಕಾಣಿಸುತ್ತಿದ್ದವು. ಇಲ್ಲಿಯ ಎಲ್ಲ ಭಾರತೀಯ ಕಾರ್ಯಕ್ರಮಗಳಂತೆ ಉದ್ಘಾಟನಾ ಸಭೆ ಸರಿಯಾಗಿ ಒಂದು ಗಂಟೆ ತಡವಾಗಿ ಸಂಜೆ 6 ಗಂಟೆಗೆ ಆರಂಭವಾಯಿತು. ಹೀಗೆ ತಡಮಾಡಿದ್ದು ಸಕಾಲದಲ್ಲಿ ಬಾರದ ಪ್ರತಿಷ್ಠಿತ ಉದ್ಘಾಟಕರಿಗಾಗಿ ಕಾಯುತ್ತಾ ಅಲ್ಲ; ದೂರದ ಸ್ಥಳಗಳಿಂದ ಬರಬೇಕಾಗಿದ್ದ ಕನ್ನಡಾಭಿಮಾನಿಗಳ ಆಗಮನದ ನಿರೀಕ್ಷೆಯಲ್ಲಿ. ಹಾಗೆ ನೋಡಿದರೆ ಸಮ್ಮೇಳನದ ಆಹ್ವಾನಪತ್ರಿಕೆಯಲ್ಲಿ ಯಾವ ಉದ್ಘಾಟಕರ ಹೆಸರೂ ಇರಲಿಲ್ಲ.

ಹಿಂದಿನ ವರ್ಷಗಳಲ್ಲಿದ್ದಂತೆ ಕರ್ನಾಟಕದಿಂದ ಯಾವ ಮಂತ್ರಿಮಹೋದಯರ ಮತ್ತು ಶಾಸಕರ ದಂಡೂ ದೌಡಾಯಿಸಿರಲಿಲ್ಲ. ಆರಂಭದ ಸಭೆಯಲ್ಲಿ (Opening Ceremony) ಪಾಲ್ಗೊಳ್ಳುವ ಗಣ್ಯವ್ಯಕ್ತಿಗಳು ಎಂದಷ್ಟೇ ಕೆಲವರ ಹೆಸರುಗಳು ಮುದ್ರಿತವಾಗಿದ್ದವು. ಅವರಲ್ಲಿ ಪ್ರಮುಖರೆಂದರೆ: ಜ್ಞಾನಪೀಠಪ್ರಶಸ್ತಿ ವಿಜೇತರಾದ ಡಾ. ಚಂದ್ರಶೇಖರ ಕಂಬಾರರು ಮತ್ತು ನಮ್ಮನ್ನೂ ಒಳಗೊಂಡಂತೆ ಆದಿಚುಂಚನಗಿರಿಯ ನಿರ್ಮಲಾನಂದ ಸ್ವಾಮಿಗಳು, ರಾಮಕೃಷ್ಣ ಆಶ್ರಮದ ನಿರ್ಭಯಾನಂದ ಮತ್ತು ವೀರೇಶಾನಂದ ಸ್ವಾಮಿಗಳು, 'ಮುಖ್ಯಮಂತ್ರಿ' ಚಂದ್ರು, ಮುಕ್ತ ಮುಕ್ತ ಧಾರಾವಾಹಿಯ ಟಿ.ಎನ್ ಸೀತಾರಾಮ್ ಮತ್ತಿತರರು. ನಮ್ಮೆಲ್ಲರನ್ನೂ ವೇದಿಕೆಯ ಕೆಳಗೆ ಸಭಾಂಗಣದ ಮೊದಲ ಸಾಲಿನಲ್ಲಿ ಕೂರಿಸಲಾಗಿತ್ತು. ವೇದಿಕೆಯ ಮುಂದೆ ಎಡಭಾಗದ ಅಂಚಿನಲ್ಲಿ ನಟರಾಜನ ಕಂಚಿನ ಪ್ರತಿಮೆ ಅದರ ಮುಂಭಾಗದಲ್ಲಿ ಗಣಪತಿಯ ವಿಗ್ರಹವನ್ನು ಇಡಲಾಗಿತ್ತು. ಪುರೋಹಿತರೊಬ್ಬರು ಒಂದು ದೀಪ ಹಚ್ಚಿ 'ಗಣಾನಾಂ ತ್ವಾ ಗಣಪತಿಗುಂ ಹವಾಮಹೇ..!' ಎಂದು ಮಂತ್ರೋಚ್ಚಾರಣೆ ಮಾಡುತ್ತಾ ವಿಘ್ನನಿವಾರಕ ಗಣಪತಿಯ ಪೂಜೆಯನ್ನು ಮಾಡತೊಡಗಿದರು. ಸಮಾರಂಭದ ಸಂಯೋಜಕರು ಸಪತ್ನೀಕರಾಗಿ ವೇದಿಕೆಯ ಮೇಲೆ ಹೋಗಿ ಭಕ್ತಿಯಿಂದ ಕೈಮುಗಿದುಕೊಂಡು ಸಾಲಾಗಿ ನಿಂತಿದ್ದರು. ಪೂಜೆಯ ನಂತರ ಒಂದಾದ ಮೇಲೊಂದರಂತೆ ಎರಡೂ ದೇಶಗಳ ರಾಷ್ಟ್ರಗೀತೆ, ರಾಷ್ಟ್ರಧ್ವಜಗಳಿಗೆ ಸಭಿಕರಿಂದ ಗೌರವ.

ನಂತರ ಒಂದು ಗಂಟೆ ಕಾಲ ಅಮೇರಿಕನ್ನಡ ಮಕ್ಕಳು ಮತ್ತು ಯುವಕ ಯುವತಿಯರಿಂದ ಪ್ರದರ್ಶಿತಗೊಂಡ ಶ್ರೀಮತಿ ಮಾಯಾರಾವ್ ನಿರ್ದೇಶಿಸಿದ 'ಸಂಪ್ರದಾಯದಿಂದ ಸಮಕಾಲೀನತೆಗೆ' ಎಂಬ ನೃತ್ಯರೂಪಕ ತುಂಬಾ ಆಕರ್ಷಕವಾಗಿತ್ತು. ಬೆಂಗಳೂರಿನ ಯಾವುದೋ ಬಡಾವಣೆಯ ಎಲ್ಲ ಮಕ್ಕಳೂ ವೇದಿಕೆಯ ಮೇಲೆ ಜಮಾಯಿಸಿದಂತಿತ್ತು! ಕಿವಿಗೆ ಇಂಪಾಗಿ ಕೇಳಿಬಂದ ಹಿನ್ನೆಲೆ ಸಂಗೀತ! ಕಾವೇರಿಯಿಂದ ಹಿಡಿದು ಗೋದಾವರಿವರೆಗೆ, ಜೋಗದ ಜಲಪಾತದಿಂದ ಹಿಡಿದು ಒಲಿಂಪಿಕ್ ಕ್ರೀಡೆಯವರೆಗೆ ಕರ್ನಾಟಕದ ವೈಭವೇತಿಹಾಸ ಕುರಿತು ರಜತಪರದೆಯ ಮೇಲೆ ಮೂಡಿ ಬಂದ ಮನಸೆಳೆಯುವ ಬೃಹದಾಕಾರದ ವರ್ಣರಂಜಿತ ಚಿತ್ರಗಳು. ಸಭೆಯ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಕರ್ನಾಟಕದಿಂದ ಬಂದವರೊಬ್ಬರ ಉದ್ಗಾರ: 'ಉದ್ಘಾಟನೆ ಯಾವಾಗ!' ನೃತ್ಯರೂಪಕದಿಂದಲೇ ಸಮ್ಮೇಳನದ ಉದ್ಘಾಟನೆ ಎಂದು ಆರಂಭದಲ್ಲಿ ಸಂಘಟಕರು ಹೇಳಿದ್ದನ್ನು ಅವರು ಕೇಳಿಸಿಕೊಂಡಂತೆ ಕಾಣಲಿಲ್ಲ. ನಮ್ಮ ದೇಶದಲ್ಲಿ ಮಂತ್ರಿಗಳಿಂದ ದೀಪ ಹಚ್ಚಿಸಿ ಉದ್ಘಾಟನೆಯಾದ ಕ್ಷಣಾರ್ಧದಲ್ಲಿ ಆರಿಹೋದ ಮಂಕುದೀಪವನ್ನು ವೇದಿಕೆಯ ಪಕ್ಕಕ್ಕೆ ಸರಿಸುವ ಪದ್ಧತಿಯನ್ನು ನೋಡಿ ಅಭ್ಯಾಸವಿದ್ದ ಅವರಿಂದ ಬಂದ ಈ ಪ್ರತಿಕ್ರಿಯೆ ಸಹಜ!

ಸಮ್ಮೇಳನದ ಅಂಗವಾಗಿ ಮಾರನೆಯ ಬೆಳಗ್ಗೆ ಸಭಾಂಗಣದ ಮುಂಭಾಗದಲ್ಲಿದ್ದ ಉದ್ಯಾನವನದಲ್ಲಿ ಮೆರವಣಿಗೆ ಇತ್ತಾದರೂ ಸಮ್ಮೇಳನಾಧ್ಯಕ್ಷರು ಎಂಬ ವಿಶೇಷ ಸ್ಥಾನಮಾನ ಯಾರಿಗೂ ಇರಲಿಲ್ಲ. ಆಯಾಯ ರಾಜ್ಯಗಳ ಕನ್ನಡ ಕೂಟದವರು ತಮ್ಮ ಸದಸ್ಯರ ಗುಂಪಿನ ಮುಂದೆ ತಮ್ಮ ಸಂಘದ ಹೆಸರುಳ್ಳ ಬ್ಯಾನರ್‌ಗಳನ್ನು ಹಿಡಿದುಕೊಂಡಿದ್ದರು.

- 2 -

ಮೈಸೂರು ಪೇಟ ಮತ್ತಿತರ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟಿದ್ದರು. ವೀರಗಾಸೆ ತಂಡದವರೂ ಇದ್ದರು. ಸಮ್ಮೇಳನದ ಆತಿಥೇಯ ಸಂಘ ಜಾರ್ಜಿಯಾದ 'ನೃಪತುಂಗ ಕನ್ನಡ ಕೂಟ'. ಅದರ ಹೆಸರಿಗೆ ತಕ್ಕಂತೆ ನೃಪತುಂಗನ ವೇಷಧರಿಸಿದ್ದ ಸದಸ್ಯರೊಬ್ಬರು ರಥದಲ್ಲಿ ಉದ್ಯಾನವನಕ್ಕೆ ಆಗಮಿಸಿ ಕೆಳಗಿಳಿದು ಅಮೇರಿಕೆಯ ಉದ್ದಗಲದಿಂದ ಆಗಮಿಸಿದ್ದ ಮಲ್ಲಿಗೆ, ಕಾವೇರಿ, ಸಂಪಿಗೆ, ಸಿರಿಗಂಧ ಮತ್ತಿತರ ಎಲ್ಲ ಕನ್ನಡ ಕೂಟಗಳ ಸದಸ್ಯರನ್ನು ತಲೆಬಾಗಿ ಸ್ವಾಗತಿಸಿದರು. ಮದುವೆ ದಿಬ್ಬಣದವರನ್ನು ಬರಮಾಡಿಕೊಂಡಂತೆ!

ಸಮ್ಮೇಳನದ ಮೂರೂ ದಿನಗಳು ಬೆಳಗಿನಿಂದ ಮಧ್ಯರಾತ್ರಿವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ರಸಧಾರೆ! ಸರದಿ ಪ್ರಕಾರ ನಮ್ಮೆಲ್ಲರ ಭಾಷಣಗಳು. ಅಮೇರಿಕೆಯಲ್ಲಿರುವ ಭಾರತದ ರಾಯಭಾರಿ ಶ್ರೀಮತಿ ನಿರುಪಮಾ ರಾವ್ ತಮ್ಮ ಭಾಷಣದಲ್ಲಿ 'ನಾನು ಕರ್ನಾಟಕದ ಸೊಸೆ' ಎಂದು ಹೇಳಿಕೊಂಡಿದ್ದು ಇಲ್ಲಿಯ ಅಮೇರಿಕನ್ನಡಿಗರಿಗೆ ಹೆಮ್ಮೆಯೆನಿಸಿತ್ತು. ಶ್ರೀಮತಿ ಸುಧಾಮೂರ್ತಿಯವರ ಸ್ವಾನುಭವದ ಮಾತೂ ಸಹ ಆಪ್ಯಾಯಮಾನವಾಗಿತ್ತು.

'ಅಕ್ಕ' ಅಪ್ಪಟ ಕನ್ನಡ ಶಬ್ದವಾದರೂ ಅಕ್ಕ ಸಮ್ಮೇಳನದ ಹೆಸರಿನಲ್ಲಿರುವ 'ಅಕ್ಕ' ಇಂಗ್ಲೀಷ್ ಶಬ್ದ. ಅಮೇರಿಕೆಯ 50 ರಾಜ್ಯಗಳಲ್ಲಿರುವ ಎಲ್ಲ ಕನ್ನಡ ಸಂಘಗಳ ಒಕ್ಕೂಟವೇ ಈ AKKA (Association of Kannada Kutas of America). 'ಅಕ್ಕಾ, ಕೇಳವ್ವಾ ನಾನೊಂದು ಕನಸ ಕಂಡೆ!' ಎಂದು ಅಕ್ಕಮಹಾದೇವಿ ಹೇಳುವಂತೆ ಅಮೇರಿಕೆಯಲ್ಲಿ ನೆಲೆಸಿರುವ ಎಲ್ಲ ಕನ್ನಡಿಗರ ಕನಸು ಸಾಕಾರಗೊಂಡ ಬೃಹತ್ ಸಂಘಟನೆ ಇದು. 35-40 ವರ್ಷಗಳ ಹಿಂದೆ ಕನ್ನಡಿಗರು ಹೇಗಿದ್ದರು ಎಂದು ನೋಡಬೇಕೆಂಬ ಮನಸ್ಸಿದ್ದರೆ ನೀವು ಅಮೇರಿಕೆಗೆ ಬರಬೇಕು. ನಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಹೆಮ್ಮೆ ಪಟ್ಟುಕೊಳುವ ಇವರಿಗೆ ಈಗ ಬದಲಾದ ಕರ್ನಾಟಕದ ಜನರನ್ನು ನೋಡಿ ಆಗುತ್ತಿರುವ ನಿರಾಸೆ ಅಷ್ಟಿಷ್ಟಲ್ಲ! ಆದರೂ ಇವರು ತಮ್ಮ ಹಳೆಯ ನೆನಪುಗಳಲ್ಲಿಯೇ ಇಲ್ಲಿ ಬದುಕುತ್ತಿದ್ದಾರೆ!

ಅಟ್ಲಾಂಟಾ
6.9.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑